ಪಂಂತ್ರಿಗಳು ಎಂದರೆ ಎಲ್ಲರ ಉಪ್ಪನ್ನು ತಿಂದಿರುವವರೇ ಆಗಿರುತ್ತಾರೆ. ನಾವು ಇದಕ್ಕೆ ಜವಾಬ್ದಾರರು ಆಗಿದ್ದೇವೆ.

ಶ್ರೀ ಎಂ. ರಾಮಪ್ಪ.—ಅವರು ನಮ್ಮ ಉಸ್ತುವಾರಿ ಪಂಂತ್ರಿಗಳು ಆಗಿರುವುದರಿಂದ ನಾನು ಅವರಿಗೆ ಹೇಳಿದ್ದೇನೆ. ನಾನು ಅವರಿಗೆ ತಮಾಷೆಯಾಗಿ ಕೂಡಾ ಒಂದು ಮಾತನ್ನು ಹೇಳಿದೆ. ನಮಗೂ ಕೂಡಾ ನೀವು ಲಿಂಗ ಕಟ್ಟಿಬಿಡಿ, ನಾವೂ ಕೂಡಾ ಅದನ್ನು ಕಟ್ಟಿಕೊಂಡು ತಿರುಗಾಡುತ್ತೇವೆ ಎಂದು ನಾನು ಅವರಿಗೆ ತಮಾಷೆಯಾಗಿ ಹೇಳಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್.—ಯಾರು ಅಧಿಕಾರಿಗಳ ವಿರುದ್ಧ ಆಪಾದನೆ ಮಾಡಿದ್ದಾರೆ ಅವರೇನೇ ಮತ್ತೆ ವರ್ಗ ಮಾಡಿ ಎಂದು ಹೇಳಿದ್ದಾರೆ.

ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆ ಬಗ್ಗೆ

೪೧೧೮. ಶ್ರೀ ಬಿ. ಉಮಾರಬ್ಬ (ವಿಟ್ಲ).— ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಕ್ಕ ಪಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫ರಿಂದ ಈಚೆಗೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿರುವ ಕೊಳವೆ ಬಾವಿಗಳು, ಮಿನಿ ಕುಡಿಯುವ ನೀರಿನ ಯೋಜನೆಗಳು ಹಾಗೂ ಗ್ರಾಮಾಂತರ ಪ್ರದೇಶಗಳು ನಲ್ಲಿ ನೀರಿನ ಯೋಜನೆಗಳು ಎಷ್ಟು?

ಆ) ಇದಕ್ಕೆ ತಗುಲಿದ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಇ) ಪೂರ್ಣಗೊಳಿಸಿದ ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರವು ವಿನಿಯೋಗಿಸಿದ ಮೊತ್ತವೆಷ್ಟು?

ಈ) ೧೯೮೫ರ ಹಿಂದಿನ ಮೂರು ವರ್ಷಗಳಲ್ಲಿ ಅನುಷ್ಠಾನಗೊಂಡಿರುವ ಯೋಜನೆಗಳೆಷ್ಟು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಕ್ಕ ಪಂಂತ್ರಿಗಳು).—

ಅ) ೧) ಕೊಳವೆ ಬಾವಿಗಳ ಸಂಖ್ಯೆ. ೨೩೭೭೦

೨) ಕಿರು ನೀರು ಯೋಜನೆಗಳ ಸಂಖ್ಯೆ.— ೨೪೦೩

೩) ನಲ್ಲಿ ನೀರಿನ ಯೋಜನೆಗಳ ಸಂಖ್ಯೆ.— ೯೭೮

ಆ) ರೂ. ೧೪ ೨೯೪.೪೧ ಲಕ್ಷಗಳು.

(ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ)

ಇ) ಕೇಂದ್ರ — ೫೨೯೫,೦೪ ಲಕ್ಷ ರೂ.ಗಳು.

ರಾಜ್ಯ — ೮೯೯೯.೩೭ ಲಕ್ಷ ರೂ.ಗಳು.

ಈ) ೧) ಕೈ ಪಂಪ್‌ಗಳನ್ನು ಅಳವಡಿಸುವ ಕೊಳವೆ ಬಾವಿಗಳು — ೩೮೯೦೩

೨) ನಲ್ಲಿ ನೀರು ಸರಬರಾಜು ಯೋಜನೆಗಳು— ೧,೦೪೬

೩) ಕಿರು ನೀರು ಸರಬರಾಜು ಯೋಜನೆಗಳು— ಇಲ್ಲ—

೧೯೮೫-೮೬, ೧೯೮೬-೮೭, ೧೯೮೭-೮೮ ಮತ್ತು ೧೯೮೮ನೇ ಆಗಸ್ಟ್ ತಿಂಗಳ ಕೊನೆಯವರೆಗೆ ಆದ ಒಟ್ಟು ರಾಜ್ಯ ಯೋಜನೆಗಳ ಜಿಲ್ಲಾವಾರು ಖರ್ಚಿನ ಪಟ್ಟಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	೧೯೮೫-೮೬ರಿಂದ ೧೯೮೮ನೇ ಆಗಸ್ಟ್ ತಿಂಗಳ ಕೊನೆಯವರೆಗೆ
೧	೨	೩
೧	ಬೆಂಗಳೂರು (ನಗರ)	೫೨.೩೫
೨	ಬೆಂಗಳೂರು (ಗ್ರಾಮ).	೫೧೮.೯೯
೩	ಕೋಲಾರ	೪೮೧.೪೪
೪	ತುಮಕೂರು	೪೫೧.೧೦
೫	ಚಿತ್ರದುರ್ಗ	೩೩೭.೦೦
೬	ಶಿವಮೊಗ್ಗ	೪೩೧.೫೦
೭	ಚಿಕ್ಕಮಗಳೂರು	೩೨೪.೫೨
೮	ಮೈಸೂರು	೬೨೫.೭೨
೯	ಮಂಡ್ಯ	೫೯೨.೭೫
೧೦	ಹಾಸನ	೪೮೨.೮೬
೧೧	ದಕ್ಷಿಣ ಕನ್ನಡ	೪೧೧.೦೩
೧೨	ಕೊಡಗು	೧೪೭.೪೮
೧೩	ಬೆಳಗಾಂ	೮೫೩.೫೯
೧೪	ಧಾರವಾಡ	೬೫೬.೨೭
೧೫	ಕಾರವಾರ	೩೧೨.೯೦
೧೬	ಬಿಜಾಪುರ	೭೪೧.೪೩
೧೭	ಗುಲ್ಬರ್ಗಾ	೬೫೪.೫೮
೧೮	ಬೀದರ್	೨೮೮.೬೧
೧೯	ರಾಯಚೂರು	೪೬೫.೪೩
೨೦	ಬಳ್ಳಾರಿ	೩೬೯.೮೨
	ಒಟ್ಟು	೮,೯೯,೩೭

೧೯೮೫-೮೬- ೧೯೮೬-೮೭, ೧೯೮೭-೮೮ ಮತ್ತು ೧೯೮೮ನೇ ಆಗಸ್ಟ್ ತಿಂಗಳ ಕೊನೆಯವರೆಗೆ ಆದ ಒಟ್ಟು ಕೇಂದ್ರ ಯೋಜನೆಗಳ ಜಿಲ್ಲಾವಾರು ಖರ್ಚಿನ ಪಟ್ಟಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	೧೯೮೫-೮೬ರಿಂದ ೧೯೮೮ನೇ ಆಗಸ್ಟ್ ತಿಂಗಳ ಕೊನೆಯವರೆಗೆ
೧	೨	೩
೧	ಬೆಂಗಳೂರು (ನಗರ)	೨೮.೨೮
೨	ಬೆಂಗಳೂರು (ಗ್ರಾಮಾಂತರ ಜಿಲ್ಲೆ)	೨೪೮.೦೭
೩	ಕೋಲಾರ	೨೬೪.೯೪
೪	ತುಮಕೂರು	೨೪೪.೨೧
೫	ಚಿತ್ರದುರ್ಗ	೧೯೬.೦೦
೬	ಶಿವಮೊಗ್ಗ	೨೧೮.೩೧
೭	ಚಿಕ್ಕಮಗಳೂರು	೧೩೫.೮೧
೮	ಮೈಸೂರು	೩೩೭.೮೬
೯	ಮಂಡ್ಯ	೨೩೮.೯೩
೧೦	ಹಾಸನ	೩೧೦.೮೨
೧೧	ದಕ್ಷಿಣ ಕನ್ನಡ	೩೭೭.೮೭
೧೨	ಕೊಡಗು	೧೧೫.೩೩
೧೩	ಬೆಳಗಾಂ	೭೨೦.೧೦
೧೪	ಧಾರವಾಡ	೪೦೩.೪೦
೧೫	ಉತ್ತರ ಕನ್ನಡ	೧೪೧:೨೩
೧೬	ಬಿಜಾಪುರ	೪೫೯,೬೭
೧೭	ಗುಲ್ಬರ್ಗ	೩೫೫,೭೮
೧೮	ಬೀದರ್	೧೩೮ ೬೩
೧೯	ರಾಯಚೂರು	೧೭೮.೦೪ ೨೦೨.೪೫
೨೦	ಬಳ್ಳಾರಿ	೮.೧೫
	ಒಟ್ಟು	೫,೨೯೫.೦೪

ಶ್ರೀ ಬಿ. ಎ. ಉಮರಬ್ಬ.— ಮಾನ್ಯ ಅಧ್ಯಕ್ಷರೇ, ನೀರನ್ನು ಒದಗಿಸುವುದರಲ್ಲಿ ೧೪೨ ಕೋಟಿ ರೂಪಾಯಿಗಳ ೪ ವರ್ಷಗಳ ಸಾಧನೆ ಏನಿದೆ ಇದಕ್ಕೆ ಪೂರಕವಾಗಿ ನಾನು ಮೂರು ಪ್ರಮುಖ ಪ್ರಶ್ನೆಗಳನ್ನು ಕೇಳುತ್ತೇನೆ. ಮೊದಲನೆಯದಾಗಿ, ಕೊಳವೆ ಬಾವಿಗಳನ್ನು ಗುತ್ತಿಗೆಗೆ ಕೊಡುವಾಗ ಖಾಸಗೀ ಸಂಸ್ಥೆಗಳಿಗೆ ಕೊಟ್ಟಿದ್ದೀರಾ ಅಥವಾ ಸರ್ಕಾರಿ ಸಂಸ್ಥೆಯಿಂದ ತೋಡಿಸಿದ್ದೀರಾ? ಖಾಸಗಿಯವರಿಗೆ ಕೊಟ್ಟಿದ್ದಲ್ಲಿ ರಾಜ್ಯದ ಎಷ್ಟು ಖಾಸಗೀ ಸಂಸ್ಥೆಗಳಿಗೆ ಕೊಟ್ಟಿದ್ದೀರಿ ಹಾಗೂ ಹೊರರಾಜ್ಯದ ಎಷ್ಟು ಖಾಸಗೀ ಸಂಸ್ಥೆಗಳಿಗೆ ಕೊಟ್ಟಿದ್ದೀರಿ? ನನ್ನ ಎರಡನೇ ಪ್ರಶ್ನೆ ಏನೆಂದರೆ ಕೇಸಿಂಗ್ ಪೈಪು ಹಾಗೂ

ಪಂಪುಗಳು ಇತ್ಯಾದಿಗಳನ್ನು ಕೊಳ್ಳುವಾಗ ಯಾವ ಕಂಪನಿಯಿಂದ ಕೊಳ್ಳಲಾಗಿದೆ? ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಕೊಂಡಿದ್ದಾರೆಯೇ? ಯಾವ ಆಧಾರದ ಮೇಲೆ ಕೊಳ್ಳಲಾಗಿದೆ? ಮೂರನೇ ಪ್ರಶ್ನೆ ಏನೆಂದರೆ ಕೇಸಿಂಗ್ ಪೈಪು ಕಡಿಮೆ ಉದ್ದವಿದೆ, ಪಂಪುಗಳು ಕಡಿಮೆ ದರ್ಜೆಯವು ಇವೆ. ಮತ್ತು ನೀರಿನ ಪೈಪುಗಳು ಸಹ ಕಡಿಮೆ ದರ್ಜೆಯವು ಇವೆ. ಇದರಲ್ಲಿ ಅಪಾರವಾಗಿ ಹಣದ ಭ್ರಷ್ಟಾಚಾರ ನಡೆದಿದೆಯೆಂದು ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ಪಿ. ಪ್ರಕಾಶ್,— ಮಾನ್ಯ ಸದಸ್ಯರ (೧) ಪ್ರಶ್ನೆಗೆ ನೇರವಾಗಿ ಈ ಉಪ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಆದರ ವಿವರ ಬೇಕಾದರೆ ಮತ್ತೊಂದು ಪ್ರಶ್ನೆಯನ್ನು ಹಾಕಿದರೆ ಸಂಪೂರ್ಣವಾಗಿರತಕ್ಕ ವಿವರಗಳನ್ನು ಕೊಡಬಹುದು. ಆದರೆ ನಮಗೆ ಗೊತ್ತಿರುವಹಾಗೆ ಸರ್ಕಾರದಲ್ಲಿ ೭೧ ರಿಗ್‌ಗಳಿವೆ. ಅರೆ ಸರ್ಕಾರಿ ಸಂಸ್ಥೆಗಳಲ್ಲಿ ೧೪ ರಿಗ್‌ಗಳಿವೆ, ಅವುಗಳ ಮೂಲಕ ಬಾವಿಗಳನ್ನು ಕೊರೆಯಲಾಗುತ್ತಿದೆ. ಅವುಗಳ ಬಗ್ಗೆ ದೂರುಗಳು ಇದ್ದುದರಿಂದ ಕ್ರಮ ಕೈಗೊಂಡಿದ್ದೇವೆ. ಆ ಆಪಾದನೆ ಬಂದ ಸಂದರ್ಭದಲ್ಲಿ ಮೇಲ್ಮನೆ ನಾಯಕರಾದ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಮಾನ್ಯ ಬಿ. ಬಿ. ಶಿವಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ, ಆ ಸಮಿತಿಯಲ್ಲಿ ಮಾನ್ಯ ಹೆಚ್.ಟಿ. ರೆಡ್ಡಿಯವರು ನಾಗೇಗೌಡರು ಹಾಗೂ ನರಸಿಂಹಮೂರ್ತಿಯವರು ಸದಸ್ಯರಾಗಿರುತ್ತಾರೆ, ಆ ಮೂರು ಜನರು ಇರತಕ್ಕ ಸಮಿತಿಯನ್ನು ರಚನೆ ಮಾಡಿ ಆದರ ಬಗ್ಗೆ ವರದಿಯನ್ನು ಸಲ್ಲಿಸಬೇಕೆಂದು ಕೇಳಲಾಗಿದೆ. ಆ ಸಮಿತಿಯವರು ಈಗಾಗಲೇ ಮೂರು ಸಲ ವಿಚಾರ ಮಾಡಿದ್ದಾರೆ, ಅದು ಹೊರಗೆ ಬರುತ್ತದೆ. ಈ ಬಗ್ಗೆ ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡಂತ್ತೇನೆ.

ಶ್ರೀ ಬಿ. ಎ. ಉಮರಬ್ಬ,— ಮಾನ್ಯ ಸಚಿವರು ಈ ಪ್ರಶ್ನೆಗೆ ಪೂರಕವಾಗಿ ನನ್ನ ಪ್ರಶ್ನೆಯಿಲ್ಲವೆಂದು ಒಂದು ಮಾತನ್ನು ಹೇಳಿದರು. ನಾವು ಸದಸ್ಯರು ಪ್ರಶ್ನೆ ಕೇಳುವಾಗ ಕೇವಲ ಅಂಕಿಸಂಖ್ಯೆಗಳನ್ನು ಪಡೆಯುವ ಉದ್ದೇಶದಿಂದ ಪ್ರಶ್ನೆಯನ್ನು ಕೇಳಿಯೆಂದು ಮಾನ್ಯ ಸಚಿವರು ಹೇಳಿದ್ದಕ್ಕಾಗಿ ನಾನು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಅಂಕಿಅಂಶಗಳ ಜೊತೆಗೆ ಅದರ ಸುತ್ತ ಇರುವ ಎಲ್ಲಾ ಚಟುವಟಿಕೆಗಳನ್ನು ಗಮನಿಸಿ ಪೂರಕ ಪ್ರಶ್ನೆಗಳನ್ನು ಕೇಳುವುದು ಸಹಜವಾದುದು. ಅದನ್ನು ಬಿಟ್ಟರೆ ಇನ್ನೇನು ಕೇಳಬೇಕು? ಕೇವಲ ಅಂಕಿಸಂಖ್ಯೆಗಳನ್ನು ಕೇಳಿದರೆ ಆಗುವುದಿಲ್ಲ. ಆ ತರಹ ಪ್ರಶ್ನೆಗಳನ್ನು ಕೇಳುವುದಕ್ಕಾಗುವುದಿಲ್ಲ. ರಾಮಾಯಣ ಕೇಳಿದು ಹೌದು, ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದ್ದೂ ಆಯಿತು. ಈಗ ಮಹಾಭಾರತ ಕೇಳುತ್ತಿದ್ದೇವೆ. ತನಿಖೆ ಮಾಡಲಿಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿದ್ದೀರಿ. ಆ ಸಮಿತಿಯಿಂದ ವರದಿ ಸರ್ಕಾರಕ್ಕೆ ಬಂದಿದೆಯೇ ಸಮಿತಿಯನ್ನು ನೇಮಕ ಮಾಡಿ ಎಷ್ಟು ಸಮಯ ಆಯಿತು? ಅದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್,— ಮಾನ್ಯ ಉಪಾಧ್ಯಕ್ಷರೇ ಪ್ರಶ್ನೆಯನ್ನು ಯಾವ ರೀತಿ ರೂಪಿಸಬೇಕೆನ್ನುವ ಬಗ್ಗೆ ನಾನು ಅವರಿಗೆ ಹೇಳಬೇಕಾಗಿಲ್ಲ. ಏಕೆಂದರೆ ಅವರು ಆಷ್ಟು ಚತುರರಿದ್ದಾರೆ. ಕಥಾ ಕಲಾಕ್ಷೇಪ ಮಹಾಭಾರತ, ಇದುವರೆಗೆ ರಾಮಾಯಣ ನಿರೀಕ್ಷೆ ಮಾಡಿದ ಹಾಗೆ ಎಂದೆಲ್ಲಾ ಹೇಳುವುದು ಸರಿಯಾದುದಲ್ಲ. ಈ ಸಮಿತಿಯ ವರದಿ ಬಂದಮೇಲೆ ಉತ್ತರ ಕೊಡುತ್ತೇನೆ.

ಶ್ರೀ ಬಿ.ಎ. ಉಮರಬ್ಬ.— ನಾನು ವರದಿ ಬಂದಿದೆಯೇ ಎಂದು ಕೇಳಿದ್ದೇನೆ, ಬಂದಿದೆಯೋ ಇಲ್ಲವೋ ಗೊತ್ತಾಗಲಿಲ್ಲ. ನನ್ನ ಸಲಹೆ ಏನೆಂದರೆ, ಈ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಯಾಯಿತು ಆಮೇಲೆ ಸಮಿತಿಯನ್ನು ರಚನೆ ಮಾಡಲಾಯಿತು. ಸಮಿತಿಯನ್ನು ರಚನೆ ಮಾಡಿ ಎಷ್ಟು ಸಮಯ ವಾಯಿತು?

ಶ್ರೀ ಎಂ.ಪಿ.ಪ್ರಕಾಶ್.— ನನಗೆ ಗೊತ್ತಿರುವ ಹಾಗೆ ಸಮಿತಿಯನ್ನು ರಚನೆ ಮಾಡಿ ಮೂರ್ನಾಲ್ಕು ತಿಂಗಳು ಆಗಿದೆ. ಆ ಸಮಿತಿಯ ಮೂರು ಸಿಟ್ಟಿಂಗ್‌ಗಳು ಆಗಿವೆ. ಮಾನ್ಯ ಶಿವಪ್ಪನವರ ಅಧ್ಯಕ್ಷತೆಯಲ್ಲಿರುವ ಕಮಿಟಿಯಲ್ಲಿ ಮಾನ್ಯ ನಾನಯ್ಯ, ನಾಗೇಗೌಡ ಹಾಗೂ ಹೆಚ್.ಟಿ. ರೆಡ್ಡಿಯವರು ಸದಸ್ಯರಾಗಿದ್ದಾರೆ.

ಶ್ರೀ ಬಿ. ಎ.ಉಮರಬ್ಬ.— ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಇರುವಂತಹವರ ಸಮಿತಿಯನ್ನು ಮಾಡಿ ವರದಿ ತರಿಸುವುದರ ಜೊತೆಗೆ ಫೀಲ್ಡ್‌ಗೆ ಹೋಗಿ ವರದಿಯನ್ನು ತಯಾರಿಸುವುದು ಒಳ್ಳೆಯದು ಅದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ. ಪ್ರಕಾಶ್.— ಆಪಾದನೆ ಬಂದಾಗ ಸರ್ಕಾರ ಸದನದ ಸಮಿತಿಯನ್ನು ನೇಮಕ ಮಾಡಿರುವಾಗ, ಅದರ ಜೊತೆಗೆ ಮತ್ತೊಂದು ಸಮಿತಿಯನ್ನು. ನೇಮಕ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಅದರ ಬಗ್ಗೆ ವಿಚಾರ ಮಾಡಲಾಗುವುದೆಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಉಪಾಧ್ಯಕ್ಷರೆ, ಮತ್ತೊಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ.

ಉಪಾಧ್ಯಕ್ಷರು.—ತಾವು ನಂತರ ಕೇಳಿ, ಇದು ಡಿಬೇಟ್ ಅಲ್ಲ. ನಾನು ಮಾನ್ಯ ಯಡಿಯೂರಪ್ಪನವರನ್ನು ಕರೆದಿದ್ದೇನೆ. ತಾವು ನಂತರ ಕೇಳಿ, ಈಗ ತಾವು ಕೂಡಿ.

ಶ್ರೀ ಬಿ. ಎ. ಉಮರಬ್ಬ,—ಮಾನ್ಯ ಉಪಾಧ್ಯಕ್ಷರೆ, ಪ್ರಶ್ನೆ ನನ್ನ ಹೆಸರಿನಲ್ಲಿದೆ. ನಾನುಹೇಳುವುದನ್ನು ಕೇಳಬೇಕು, ಬೇರೆಯವರನ್ನು ಹೇಗೆ ಕರೆಯುತ್ತೀರಿ ಇದೇನುಸ್ವಾಮಿ ?

ಉಪಾಧ್ಯಕ್ಷರು.—ನಾನು ಅವರು ಪ್ರಶ್ನೆ ಕೇಳಲಿಕ್ಕೆ ಅಲೋ ಮಾಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆಯಿತು, ಅವರೇ ಕೇಳಲಿ ಅವಕಾಶ ಕೊಡಿ.

ಶ್ರೀ ಬಿ. ಎ. ಉಮರಬ್ಬ.—ಬೋರ್‌ವೆಲ್ ಡ್ರಿಲ್ಲಿಂಗ್ ಕಂಟ್ರಾಕ್ಟ್ ತೆಗೆದುಕೊಂಡಿರುವವರ ಪೈಕಿ ಹಿಂದಿನ ಮುಖ್ಯಮಂತ್ರಿಗಳ ಈಗಿನ ಸಚಿವರ ಸಂಬಂಧಿಕರು ಯಾರಾದರೂ ಇದ್ದಾರೆಯೆ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಈ ಮೂಲ ಪ್ರಶ್ನೆಗೆ ಪೂರಕವಾಗಿ ಈ ಪ್ರಶ್ನೆ ಇಲ್ಲ. ಆ ಬಗ್ಗೆ ನೇರವಾಗಿರತಕ್ಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಉಪಾಧ್ಯಕ್ಷರೇ. ಈಗಾಗಲೇ ಈ ವಿಷಯದಲ್ಲಿ ಈ ಬೋರ್‌ವೆಲ್ ಹಗರಣದ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಸಾಕಷ್ಟು ಆರೋಪಗಳು ಕೇಳಬಂದಿದೆ. ಇಲ್ಲಿ ಸಾಕಷ್ಟು ಚರ್ಚೆ ಕೂಡ ಆಗಿದೆ. ಮೇಲ್ಮನೆಯಲ್ಲಿ ಒಂದು ಸಮಿತಿಯನ್ನು ಮಾಡಿ ತನಿಖೆ ಆಗುತ್ತಿದೆ, ಅವರು ವರದಿಯನ್ನು ಕೊಡುತ್ತಾರೆ ಎಂದು ಹೇಳುತ್ತೀರಿ. ಈ ಸದನದಲ್ಲಿ ಈ ಕಡೆಯ ಆ ಕಡೆಯ ಎಲ್ಲಾ ಶಾಸಕರು ಸಹ ಈ ಹಗರಣದಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗಿದೆ, ಅವ್ಯವಹಾರ ನಡೆದಿದೆ ಎಂದು ಹೇಳುತ್ತಿರುವುದರಿಂದ ಈ ಸದನವನ್ನು ಕಾನ್ಫಿಡೆನ್ಸಿಗೆ ತೆಗೆದುಕೊಂಡು ಸದನದ ಸಮಿತಿಯನ್ನು ನೇಮಕ ಮಾಡಬೇಕು. ಆದಷ್ಟು ಬೇಗ ಈ ಸದನದ ಶಾಸಕರ, ವಿರೋಧ ಪಕ್ಷದ ಆಡಳಿತ ಪಕ್ಷದ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಒಂದು ಸಮಿತಿಯನ್ನು ಮಾಡುವುದು ಸೂಕ್ತ ಇದೆ. ಆಗ ಈ ಆರೋಪಗಳು ಎಷ್ಟರಮಟ್ಟಿಗೆ ನಿಜವೆಂದು ಗೊತ್ತಾಗುತ್ತದೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.— ಮಾನ್ಯ ಉಪಾಧ್ಯಕ್ಷರೇ, ಶ್ರೀ ಉಮರಬ್ಬನವರು ಕೇಳಿದ ಪ್ರಶ್ನೆ ಬಹಳ ಸಹಜವಾದದ್ದು ಇದೆ. ಇದರಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ನ್ನು ಸಾಕುವ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ನಾನು ಶ್ರೀ ಅಬ್ದುಲ್ ನಜೀರ್‌ಸಾಬ್, ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆ ಮಾಡಿದ ನಂತರ ಇದರ ಬಗ್ಗೆ ಉತ್ತರವನ್ನು ಕೊಡುತ್ತೇನೆ,

ಶ್ರೀ ಬಿ. ಎಸ್. ಯಡಿಯೂರಪ್ಪ —ಮಾಡುವುದಿಲ್ಲ ಎಂದರೆ ನನ್ನ ವಿರೋಧ ಇಲ್ಲ. ಈ ಸದನದಲ್ಲಿ ಇರುವಂಥ ಎಲ್ಲಾ ಪಕ್ಷದ ಶಾಸಕರ ಒಂದ ಸಮಿತಿಯನ್ನು ಮಾಡಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ನ್ನು ಜೊತೆಗೆ ಸೇರಿಸಿಕೊಂಡು ಅವರ ಅಭಿಪ್ರಾಯವನ್ನು ತೆಗೆದುಕೊಂಡು ವರದಿಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಮೇಲ್ಮನೆಯಲ್ಲಿ ಅವಕಾಶ ಕೊಟ್ಟಿರುವ ಹಾಗೆ ಇಲ್ಲೂ ಇದರ ಬಗ್ಗೆ ಸಾಕಷ್ಟು ಆರೋಪಗಳನ್ನು ಮಾಡಿರುವುದರಿಂದ, ಈ ಸದನದಲ್ಲಿ ಜನತೆಯಿಂದ ಆರಿಸಿಬಂದಿರುವ ಪ್ರತಿನಿಧಿಗಳು ಇರುವಾಗ, ಅವರ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನಂ ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮೇಲ್ಮನೆಯ ವರದಿ ಬಂದನಂತರ ಮಾನ್ಯ ಸದಸ್ಯರ ಸಲಹೆಯನ್ನು ಕೂಡ ಪರಿಶೀಲಿಸಲಾಗುತ್ತದೆ.

ಶ್ರೀ ಆರ್. ವೆಂಕಟರಾವಮಯ್ಯ.—ಬೋರ್‌ವೆಲ್ ರಿಗ್ ಮಾಡುವುದಕ್ಕೆ ಬೇರೆ ಡಿವಿಜನ್ ಇದೆ. ಇದರ ರಿಪೇರಿ ಮಾಡಿಸುವುದಕ್ಕೆ ಜಿಲ್ಲಾಪರಿಷತ್‌ಗಳಿಗೆ ಅಧಿಕಾರ ಕೊಟ್ಟಿದ್ದಾರೆ, ಆದರೆ ಇಬ್ಬರಲ್ಲೂ ಕೋ ಆರ್ಡಿನೇಶನ್ ಇಲ್ಲ. ಕೆಲಸ ಸರಿಯಾಗಿ ಜರುಗುತ್ತಿಲ್ಲ. ಈ ಬಗ್ಗೆ ಸರಿಯಾದ ಕೋ ಆರ್ಡಿನೇಶನ್

ಬರುವಹಾಗೆ ಮಾಡುತ್ತೀರಾ ? ಎರಡನೆಯುದು ಎ. ಆರ್. ಡಬ್ಲ್ಯೂ. ಎಸ್ ಮತ್ತು ಎಸ್. ಎಸ್. ಡಬ್ಲ್ಯೂ. ಎಸ್. ಸರ್ಕಾರಕ್ಕೆ ಬಂದು ಬಹಳ ಸಮಯವಾದರೂ ಗ್ರ್ಯಾಂಟ್ ಕೊಡದೆ ಉಳಿಸಿಕೊಂಡಿದ್ದೀರಿ. ಇದನ್ನು ಬೇಗ ಮಾಡಿಕೊಡುತ್ತೀರಾ ? ಮೂರನೇಯದು, ಪ್ರೈವೇಟ್‌ನಲ್ಲಿ ೩೨ ರೂಪಾಯಿಗಳನ್ನು ಒಂದು ಆಡಿಗೆ ಚಾರ್ಜ್ ಮಾಡುತ್ತಾರೆ, ಆದರೆ ನೀವು ೬೪ ರೂಪಾಯಿ ಕೊಡುತ್ತಿದ್ದೀರಿ. ಈ ವ್ಯತ್ಯಾಸಕ್ಕೆ ಏನು ಕಾರಣ ? ದಯವಿಟ್ಟು ಈ ಅಂತರವನ್ನು ಪರಿಹರಿಸಿದರೆ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಏಗುತ್ತದೆ, ಇದರ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಈ ವಿಚಾರದ ಬಗ್ಗೆ ಕ್ರೋಢೀಕೃತವಾದಂಥ ಕೆಲಸ ಆಗುವುದರ ಬಗ್ಗೆ ವಿವಾದ ಇಲ್ಲ. ಈ ಬಗ್ಗೆ ತಾವು ಜಿಲ್ಲಾ ಪರಿಷತ್ತುಗಳಲ್ಲಿ ಮಾತನಾಡಬಹುದು. ನಾವು ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದರೆ ೩೪ ರೂಪಾಯಿ ಮತ್ತು ೬೪ ರೂಪಾಯಿಗಳ ರೇಟ್‌ನಲ್ಲಿ ವ್ಯತ್ಯಾಸ ಏನಿದೆ, ನನಗೆ ತಿಳಿದುಬಂದಂತೆ ನೋವಾಟರ್ ನೋಮನ ಬೇಸಿಸ್ ಮೇಲೆ ಮಾಡುತ್ತಾರೆ. ಈಗ ಆರೆ ಸರ್ಕಾರಿ ಸ್ವಾಮ್ಯಕ್ಕೆ ಒಳಪಡತಕ್ಕಂಥ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನವರಿಗೆ ಕೊಟ್ಟಿಂಥ ಸಂದರ್ಭದಲ್ಲಿ ಆಕಸ್ಮಾತ್ತಾಗಿ ವಿಫಲವಾದಂಥ ಬಾವಿ ಇದ್ದರೆ ನೀರು ಬಾರದೇ ಇದ್ದರೆ ಸಾಲ ರೈತರ ಮೇಲೆ ಬೀಳುವುದಿಲ್ಲ. ಖಾಸಗಿಯವರಾದರೆ ನೀರು ಬರಲಿ, ಬಾರದೇ ಇರಲಿ ೩೪ ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ಆದ್ದರಿಂದ ಈ ವ್ಯತ್ಯಾಸ ಇರಬಹುದು. ಈ ವಿಚಾರದ ಬಗ್ಗೆ ಪ್ರತ್ಯೇಕವಾದಂಥ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಪಟವಂಕ್ಕ ರತ್ನಾಕರ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕಿರು ನೀರಾವರಿ ಸರಬರಾಜು ಯೋಜನೆ ಇಲ್ಲವೆಂದು ಹೇಳಿದ್ದಾರೆ. ದಯವಿಟ್ಟು ಸರ್ಕಾರದವರು ಇದನ್ನು ಯಾವ ಕಾರಣಕ್ಕೋಸ್ಕರ ನಿಲ್ಲಿಸಿದ್ದಾರೆ ಎಂದು ಹೇಳಬೇಕು. ಇಲ್ಲ, ಇದನ್ನು ಶಾಶ್ವತವಾಗಿ ನಿಲ್ಲಿಸಿದ್ದೀರೋ ಅಥವಾ ಹಣಕಾಸಿನ ತೊಂದರೆಯಿಂದ ಸದ್ಯಕ್ಕೆ ನಿಲ್ಲಿಸಿದ್ದೀರೋ ಎಂದು ಹೇಳಬೇಕು ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಕೂಡಲೇ ಕೋಪಿಸಿಕೊಳ್ಳುವುದಿಲ್ಲವೆಂದು ಭಾವಿಸುತ್ತೇನೆ. ಕಿರು ನೀರಾವರಿ ಎಂದರೆ ಅವರು ಹೇಳಿದ್ದು ೮೫ರ ಹಿಂದಿನ ಮೂರು ವರ್ಷಗಳಲ್ಲಿ ಅನುಷ್ಠಾನಕ್ಕೆ ತಂದಿರುವ ಯೋಜನೆಗಳು ಎಷ್ಟು ಎಂದು. ೮೫ರ ಹಿಂದೆ ಕಿರು ನೀರಾವರಿ ಯೋಜನೆ ಇರಲಿಲ್ಲ. ನಮ್ಮ ಜನತಾ ಪಕ್ಷ ಅಧಿಕಾರಕ್ಕೆ ಬಂದನಂತರ ಈ ಯೋಜನೆ ಪ್ರಥಮವಾರಿಗೆ ೮೫ ರಿಂದೀಚೆಗೆ ಅನುಷ್ಠಾನ ಆಗಿದೆ. ಹಿಂದಿನ ಮೂರು ವರ್ಷಗಳಲ್ಲಿ ಈ ಯೋಜನೆ ಜಾರಿಯಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಈ ಕಾರಣಕ್ಕಾಗಿ ನಾನು ಇಲ್ಲವೆಂದು ಹೇಳಿದ್ದೇನೆ.

ಶ್ರೀ ಪಟವಂಕ್ಕ ರತ್ನಾಕರ್.—ಇಲ್ಲಿ ಮುಖ್ಯವಾಗಿರತಕ್ಕಂಥಾದ್ದು.....

ಉಪಾಧ್ಯಕ್ಷರು —ದಯವಿಟ್ಟು ಕುಳಿತಕೊಳ್ಳಿ, ಸಾಕಷ್ಟು ಹೊತ್ತಾಯಿತು. ಶ್ರೀ ನೀಲಕಂಠಪ್ಪ ನವರೇ, ನಿಮ್ಮ ಪ್ರಶ್ನೆಯನ್ನು ಕೇಳಿ.

ತರೀಕೆರೆ ತಾಲ್ಲೂಕಿನಲ್ಲಿ ಕೊಡಿಯುವ ನೀರು ಸರಬರಾಜು ಯೋಜನೆಯ ಬಗ್ಗೆ.

೭೯೧. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಕೊಡಿಯುವ ನೀರು ಸರಬರಾಜು ಯೋಜನೆಯನ್ನು (ನಲ್ಲಿ ನೀರು) ಅಳವಡಿಸಲಾಗಿದೆ ?

ಆ) ಹಲಸೂರು ಮತ್ತು ಇತರೆ ಜೋಡಿ ಗ್ರಾಮಕ್ಕೆ ಮತ್ತು ಮಳಲಿಚನ್ನೇನ ಹಳ್ಳಿ, ಹೆಚ್. ರಂಗಾಪುರದ ಗ್ರಾಮಗಳಿಗೆ, ನೀರು ಸರಬರಾಜು ಯೋಜನೆ ಮಾಡಲು ಜಿಲ್ಲಾಪರಿಷತ್ ಮತಿಯಿಂದ ಸರ್ಕಾರಕ್ಕೆ ಮನವಿ ಮಾಡಿದೆಯೇ ?

ಇ) ಹಾಗಿದ್ದಲ್ಲಿ, ಇದನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು ?